
ಅಷ್ಟರಲ್ಲಿ ಇನ್ನೊಂದು ಬಸ್ಸು ಬಂತು. ಅದರಲ್ಲಿ ಸೀಟ್ ಖಾಲಿ ಇದೆ, ಅದು ಇದಕ್ಕಿಂತ ಮೊದಲು ಹೋಗುತ್ತೆ ಎಂದು ಇದರಲ್ಲಿ ನಿಂತಿದ್ದೋರೆಲ್ಲ ದಬದಬ ಇಳಿದರು. ಪಕ್ಕದಲ್ಲಿ ಜಾಗ ಕೊಟ್ಟು ಕೂತಿದ್ದವನು ತನ್ನ ಬ್ಯಾಗು, ವಾಚು ಬಿಗಿಯಾಗಿ ಹಿಡಿದು ಕೊಂಡು ಕೂತಿದ್ದ. ಹಿಂದಿನ ಇಬ್ಬರ ಜಗಳ ಕಮ್ಮಿ ಆದಮೇಲೆ ಸ್ವಲ್ಪ ಶಾಂತನಾದ.



ನಾನು ಕಿಟಕಿಯ ಕಡೆಗೆ ಕೂತಿದ್ದೆ. ಅವನು ನನ್ನ ಪಕ್ಕದಲ್ಲಿ, ಅವನ ಎಡಗಡೆಗೆ ಕಂಬಿಗೆ ಒರಗಿಕೊಂಡು ಒಂದಿಬ್ಬರು ಸಣಕಲು ಹುಡುಗರು ನಿಂತಿದ್ದರು.

ರಾಮಕೃಷ್ಣ ಆಶ್ರಮಕ್ಕೆ ನಾನು ಟಿಕೆಟ್ ತೆಗೆದುಕೊಂಡೆ. ಆ ಮನುಷ್ಯ ಇನ್ನು ಮುಂದಕ್ಕೆ ಹೋಗಲಿದ್ದ. ಚಾಮರಾಜಪೇಟೆ ದಾಟಿದ ಅನಂತರ ನಾನು ಬಸ್ಸು ಇಳಿಯೋದಕ್ಕೆ ಬಾಗಿಲ ಕಡೆ ಹೋಗುತಿದ್ದೆ. ಇದ್ದಕಿದ್ದ ಹಾಗೆ ಆ ವ್ಯಕ್ತಿ ಕೂಗಿಕೊಂಡ, ''ನನ್ನ ವಾಚು, ನನ್ನ ವಾಚು ಕಳುವಾಗಿದೆ'' ಅಂತ. ನನ್ನ ಕಡೆ ಕೈ ತೋರಿಸಿದ, ಅಷ್ಟೇ. ಇದು ಸತ್ಯವೇ, ಸುಳ್ಳೇ ಅಂತ ಏನೂ ಯೋಚಿಸದೆ, ಬಸ್ಸಲ್ಲಿ ಇದ್ದ ಒಬ್ಬ ನನ್ನ ಕತ್ತಿನ ಪಟ್ಟಿ ಹಿಡಿದುಕೊಂಡ. ಮತ್ತೊಬ್ಬ ಕೈ ಕಟ್ಟಿ ಹಿಡಿದ. ಗುಂಪಲ್ಲಿ ಯಾರು ಯಾರೋ ಕುರಿ ಹಳ್ಳಕ್ಕೆ ಬಿದ್ದರೆ ಆಳಿಗೆ ಒಂದು ಕಲ್ಲು ಎನ್ನುವ ಹಾಗೆ ಸಿಕ್ಕಿದ್ದೇ ಅವಕಾಶ ಅಂತ ಎಲ್ಲರೂ ಪೆಟ್ಟು ಕೊಟ್ಟೋರೇ. ನನ್ನ ಶರ್ಟ್, ಪ್ಯಾಂಟ್, ಜೇಬು ಎಲ್ಲ ಚೆಕ್ ಮಾಡಿದರು. ಕೊನೆಗೆ, ಪ್ಯಾಂಟ್ ಬಿಚ್ಚಿಸಿ ಒಳಚಡ್ಡಿನೂ ಚೆಕ್ ಮಾಡಿದರು. ''ರೀ ಬಿಡ್ರಿ, ನಾನು ಕಳ್ಳ ಅಲ್ಲ'' ಅಂತ ಎಷ್ಟು ಹೇಳಿದರೂ ಕೇಳುವ ವ್ಯವಧಾನ ಯಾರಿಗೂ ಇರಲಿಲ್ಲ.

''ನಿಮ್ಮಂತೋರನ್ನ ಎಷ್ಟು ಜನ ನೋಡಿಲ್ಲ ನಾವು'' ಎಂದ ಒಬ್ಬ.

''ಇವನು ಕದ್ದು ಇನ್ನೊಬ್ಬನಿಗೆ ಕೊಟ್ಟಿರುತ್ತಾನೆ, ಅವನು ಇಳಿದು ಓಡಿಹೋಗಿರ್ತಾನೆ. ಇವನನ್ನ ಒದ್ದು ಪೊಲೀಸಿಗೆ ಕೊಟ್ಟರೆ ಎಲ್ಲಾ ಬಾಯಿ ಬಿಡ್ತಾನೆ'' ಅಂತ ಇನ್ನೊಬ್ಬ.

ಮತ್ಯಾರೋ, ''ಕಡಿದರೆ ನಾಲ್ಕು ಆಳು ಆಗ್ತಾನೆ. ದುಡ್ಕೊಂಡು ತಿನ್ನೋಕೆ ಆಗಲ್ಲ, ಏನು ಜನ್ಮ, ಥು'' ಎಂದು ಉಗಿದರು.